**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ, ಪಿರಿಯಾಪಟ್ಟಣ.</u>**

**ದಿನಾಂಕ 20 ನೇ ಮಾಹೆ ಫೆಬ್ರವರಿ 2023**

**<u>ಸಿ.ಸಿ.293/2022</u>**

ಪಿರ್ಯಾದುದಾರರು : ರಾಜ್ಯದ ಪರ ಬೆಟ್ಟದಪುರ ಠಾಣಾ ಆರಕ್ಷಕರು
(ಸಹಾಯಕ ಸರ್ಕಾರಿ ಅಭಿಯೋಜಕರವರಿಂದ)

ವಿರುದ್ಧ

ಆರೋಪಿಗಳು :1. ಪುನೀತ.ಎ.ಎಲ್,
ಬಿನ್ ಲೇಟ್. ಲೋಕೇಶ,
ವಯಸ್ಸು 27 ವರ್ಷ,

2. ಅನಿತ್ ಕುಮಾರ್ ಉಃ ಅನಿಲ್,
ಬಿನ್ ಲೇಟ್ ಲೋಕೇಶ್,
ವಯಸ್ಸು 23 ವರ್ಷ,

3. ಕರೀಗೌಡ,
ಬಿನ್ ಬೇಲೂರಯ್ಯ,
ವಯಸ್ಸು 65 ವರ್ಷ,

ಎಲ್ಲರ ವಾಸಃ ಅಂಬಲಾರೆ ಗ್ರಾಮ,
ಪಿರಿಯಾಪಟ್ಟಣ ತಾಲ್ಲೂಕು,
ಮೈಸೂರು ಜಿಲ್ಲೆ.

**<u>ದೋಷಾರೋಪಣೆ</u>**

ಶ್ರೀಮತಿ.ಶ್ವೇತ.ಜೆ., *ಬಿ.ಕಾಂ., ಎಲ್.ಎಲ್.ಬಿ*, ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪಿರಿಯಾಪಟ್ಟಣ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಅಂದರೆ, 1 ರಿಂದ 3 ನೇ ಆರೋಪಿಗಳ ವಿರುದ್ಧ ಮಾಡುವ ಆಪಾದನೆ ಏನೆಂದರೆ,

ಮೊದಲನೇಯದಾಗಿ, ದಿನಾಂಕ 16.01.2022 ರಂದು ಬೆಳಿಗಗೆ 9.40 ಗಂಟೆ ಸಮಯದಲ್ಲಿ ಬೆಟ್ಟದಪುರ ಪೊಲೀಸ್ ಠಾಣಾ ಸರಹದ್ದು, ಅಂಬಲಾರೆ ಗ್ರಾಮದ ಮುಖ್ಯ

ರಸ್ತೆಯಲ್ಲಿ ಚಾಸಾ.2 ರಾಕೇಶ ರವರು ನಡೆದುಕೊಂಡು ಹೋಗುತ್ತಿರುವಾಗ 1 ಮತ್ತು 3 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ, 1 ಮತ್ತು 2 ನೇ ಆರೋಪಿತರು ಹಳೇ ದ್ವೇಷ ತೆಗೆದು 'ಸೂಳೆ ಮಗನೇ, ಬೋಳಿ ಮಗನೆ' ಎಂದು ಅವಾಚ್ಯ ಶಬ್ದಗಳಿಂದ ಬೈಯ್ದು ನಿಂದಿಸಿರುತ್ತೀರಿ, ಆ ಮೂಲಕ 1 ರಿಂದ 3 ನೇ ಆರೋಪಿಗಳಾದ ನೀವು **ಭಾರತ ದಂಡ ಸಂಹಿತೆ ಕಲಂ.504 ಸಹವಾಚಕ 34 ರ ಕಾಯ್ದೆ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 3 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ದೊಣ್ಣೆಯಿಂದ ಚಾಸಾ.2 ರವರ ಎಡಭುಜಕ್ಕೆ ಮತ್ತು ಬಲಗೈ ಮುಂಗೈಗೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯವುಂಟು ಮಾಡಿರುತ್ತೀರಿ, ಆ ಮೂಲಕ 1 ರಿಂದ 3 ನೇ ಆರೋಪಿಗಳಾದ ನೀವು **ಭಾರತ ದಂಡ ಸಂಹಿತೆ ಕಲಂ.324 ಸಹವಾಚಕ 34 ರ ಕಾಯ್ದೆ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 3 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ, 3 ನೇ ಆರೋಪಿಯು 'ಅದೇನು ಆಗುತ್ತದೆಯೋ, ನಾನು ನೋಡಿಕೊಳ್ಳುತ್ತೇನೆ ಹೊಡಿರಿ' ಎಂದು ಕುಮ್ಮಕ್ಕು ನೀಡಿರುತ್ತೀರಿ, ಆ ಮೂಲಕ 1 ರಿಂದ 3 ನೇ ಆರೋಪಿಗಳಾದ ನೀವು **ಭಾರತ ದಂಡ ಸಂಹಿತೆ ಕಲಂ.114 ಸಹವಾಚಕ 34 ಕಾಯ್ದೆ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಕೊನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 3 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ, 1 ಮತ್ತು 2 ನೇ ಆರೋಪಿಗಳು 'ಈ ದಿವಸ ಬಚಾವಾಗಿದ್ದೀಯ, ಮುಂದೊಂದು ದಿವಸ ನಿನ್ನನ್ನು ಮುಗಿಸದೆ ಬಿಡುವುದಿಲ್ಲ' ಎಂದು ಕೊಲೆ ಬೆದರಿಕೆ ಹಾಕಿರುತ್ತೀರಿ, ಆ ಮೂಲಕ 1 ರಿಂದ 3 ನೇ ಆರೋಪಿಗಳಾದ ನೀವು **ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ 34 ರ ಕಾಯ್ದೆ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಈ ಮೇಲ್ಕಂಡ ದೋಷಾರೋಪಣೆಗೆ ನೀವು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿದ್ದೇನೆ.

**(ಶ್ವೇತ.ಜೆ)**
ಹೆಚ್ಚುವರಿ ಸಿವಿಲ್ ನ್ಯಾಯಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿ,
ಪಿರಿಯಾಪಟ್ಟಣ.